

ಹೊಳೆಯಲ್ಲಿ ಮುಳುಗುತ್ತಲಿದ್ದ ಶಾಲಾ ಹೆಡ್‌ಮಾಸ್ತರನ್ನು ಕಂಡ ಹಳ್ಳಿ ಹೈದ ಬೊಬ್ಬೆ ಹಾಕಿಕೊಂಡು ಓಡಿದ. ...ನಾಳೆ ಶಾಲೆಗೆ ರಜೆ.

★★★

ಶಿಕ್ಷಕಿ: ಸಿದ್ದಾ, ರಾಮಾಯಣ ಯಾಕೆ ಬರೆದರು ಗೊತ್ತಾ?
ಸಿದ್ಧ: ಗೊತ್ತು ಟೀಚರ್.
ಶಿಕ್ಷಕಿ: ಯಾಕೆ?
ಸಿದ್ಧ: ಆಗ ಪ್ರಿಂಟಿಂಗ್ ಪ್ರೆಸ್ ಇರಲಿಲ್ಲ ಟೀಚರ್.


★★★

ಹೆಂಡತಿ: ರ‍್ರೀ, ಸ್ವರ್ಗದಲ್ಲಿ ಗಂಡನ ಜೊತೆ ಹೆಂಡ್ತಿಯನ್ನು ಇರೋಕೆ ಬಿಡಲ್ವಂತೆ.
ಗಂಡ: ಅದಕ್ಕೆ ಕಣೆ... ಅದನ್ನು ಸ್ವರ್ಗ ಎನ್ನೋದು.

★★★

ಫೋನ್: ನೀವು ಕರೆ ಮಾಡಿದ ಚಂದಾದಾರರು ವ್ಯಾಪ್ತಿ ಪ್ರದೇಶದ ಹೊರಗಿದ್ದಾರೆ.
ತುಂಟಾ: ಅಕ್ಕಾ, ಅವರನ್ನು ಸ್ವಲ್ಪ ಒಳಗೆ ಕರೀತೀರಾ? ಸ್ವಲ್ಪ ಅರ್ಜೆಂಟ್ ಮಾತನಾಡಲಿಕ್ಕಿದೆ.

★★★



ಸಂತಾನ ಮಗ: ಅಪ್ಪಾ, ನಾನು ಪ್ರಥಮ ದರ್ಜೆಯಲ್ಲಿ ಪಾಸಾಗಿದ್ದೇನೆಂದು ತಿಳಿದರೆ ನಿಮಗೆ ಹೇಗಾಗಬಹುದು?
ಸಂತಾ: ಪುತ್ತರ್, ನಾನು ಖುಷಿಯಿಂದ ಹುಚ್ಚನೇ ಆಗುವೆ.
ಮಗ: ಸಾಕು, ಇದೇ ಭಯಕ್ಕೆ ನಾನು ಫೇಲ್ ಆಗಿಬಿಟ್ಟೆ.

ಸಂಗ್ರಹ: **ಶಾಲಿನಿ ವಿ. ಕಾಮತ್, ಮುಂಬಯಿ**

---

ಗೋಪಿ: ಇನ್ನೆಂದೆಂದಿಗೂ ನಾನು ಹೆತ್ತವರ ಮೇಲೆ ಅವಲಂಬಿತನಾಗಿರುವುದಿಲ್ಲ.
ರಾಮು: ಯಾಕೋ ಹಾಗಂತಿ?
ಗೋಪಿ: ಏಕೆಂದರೆ ನಾನವರಿಗೆ ಎನ್‌ಸೈಕ್ಲೋಪೀಡಿಯಾ ಖರೀದಿಗೆ ರೂಪಾಯಿ 5 ಸಾವಿರ ಕಳಿಸಲು ಕೇಳಿಕೊಂಡರೆ ಅವರು ಎನ್‌ಸೈಕ್ಲೋಪೀಡಿಯಾವನ್ನೇ ಕಳಿಸಿ ಬಿಟ್ಟಿದ್ದಾರೆ...?!


★★★

ರಾಮು: ನಿಜವಾದ ಸಂಗೀತ ಪ್ರಿಯನನ್ನು ನೀನು ಹೇಗೆ ಗುರುತಿಸಬಲ್ಲೆ?
ಗೋಪಿ: ಯುವತಿ ಬಾಥ್ ರೂಂನಲ್ಲಿ ಹಾಡುವಾಗ ಅದರ ಬಾಗಿಲಿನ ರಂಧ್ರದಲ್ಲಿ ಕಣ್ಣಿನ ಬದಲು ಕಿವಿಯನ್ನು ಇಟ್ಟು ಆಲಿಸುವವನೇ ನಿಜವಾದ ಸಂಗೀತ ಪ್ರಿಯ!

★★★

2018ರ ಇಸವಿಯಲ್ಲಿ ಬ್ಯಾಂಕುಗಳ ಹೊರಗೆ ಕಾಣಿಸಿಕೊಳ್ಳಲಿರುವ ಹೊಸ ಪೋಸ್ಟರ್. 'ಇಲ್ಲಿ ಪೆಟ್ರೋಲ್ ಲೋನ್ ದೊರೆಯುವುದು!'

★★★




ಮದುವೆ ಮನೆಯಲ್ಲಿ ಊಟದ ಪ್ಲೇಟ್ ಜೊತೆ ಟಿಶ್ಯೂ ಪೇಪರ್ ಕೊಟ್ಟಿದ್ದರು. ಗೋಪಿ ಅದನ್ನು ತಿನ್ನೋದಕ್ಕೆ ನೋಡ್ತಾ ಇದ್ದಾಗ ಮಂಟಾ ಹೇಳಿದ... 'ಅದನ್ನು ತಿನ್ನ ಬೇಡ ಮಾರಾಯ, ಒಂದು ಚೂರೂ ಟೇಸ್ಟ್ ಇಲ್ಲ!'

ಸಂಗ್ರಹ: **ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ**

# ಮಾರ್ಕೆಟಿಂಗ್ ಟಿಪ್ಸ್

ಮಾರ್ಕೆಟಿಂಗ್ ಇವತ್ತು ಅತ್ಯಂತ ಸವಾಲಿನ ಕೆಲಸ. ಜತೆಗೆ ಈ ಕ್ಷೇತ್ರದಲ್ಲಿ ಸ್ಪರ್ಧೆಯೂ ಜೋರಾಗಿ ನಡೆದಿದೆ. ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್‌ಗಳಿಗೆ ಸುಲಭ ಮಾರುಕಟ್ಟೆಯ ತತ್ವಗಳನ್ನು ಕಲಿಸುವುದು ಹೇಗೆ? ನಮ್ಮ ಪ್ರೊಫೆಸರ್ ಮಂಟಾಜೀ ಮಾರ್ಕೆಟಿಂಗ್ ಟಿಪ್... ಕೆಳಗಿನಂತೆ ಉದಾಹರಣೆ ಸಹಿತ ಟಿಪ್ಸ್‌ಗಳನ... ನಿಮಗೂ ಅನುಕೂಲ ಆಗಬಹುದು– ಓದಿ ...



★ ಭರ್ಜರಿಯಾಗಿ ಡ್ರೆಸ್ ಹಾಕಿಕೊಂಡು ಸ... ಮಿಂಚುತ್ತಿರುವ ಹುಡುಗಿಯೊಬ್ಬಳನ್ನು ಪಾರ್ಟಿಯೊಂದರಲ್ಲಿ ನೀವು ನೋಡುತ್ತೀರ. ... ಹತ್ತಿರ ಹೋಗಿ 'ನಾನು ಬಹಳ ಶ್ರೀಮಂತ. ... ಮದುವೆಯಾಗು' ಎಂದರೆ ಅದು– ನೇರ ಮಾರುಕಟ್ಟೆ (ಡೈರೆಕ್ಟ್ ಮಾರ್ಕೆಟಿಂಗ್).

★ ನೀವು ಗೆಳೆಯರೊಡನೆ ಪಾರ್ಟಿಯಲ್ಲಿದ್ದಾಗ ಚೆನ್ನಾಗಿ ಅಲಂಕರಿಸಿಕೊಂಡ ರೂಪವತಿಯನ್ನು ನೋಡುತ್ತೀರ. ನಿಮ್ಮ ಗೆಳೆಯರಲ್ಲೊಬ್ಬ ಆಕೆಯ ಬಳಿ ಹೋಗಿ ನಿಮ್ಮ ಕಡೆ ಬೆರಳು ತೋರಿಸುತ್ತಾ, 'ಅವನು ತುಂಬಾ ಶ್ರೀಮಂತ. ಅವನನ್ನು ಮದುವೆಯಾಗು' ಎನ್ನುತ್ತಾನೆ. ಅದು– ಜಾಹೀರಾತು (ಅಡ್ವರ್ಟೈಸ್‌ಮೆಂಟ್).

★ ನೀವು ಪಾರ್ಟಿಯೊಂದರಲ್ಲಿ ಚೆಲುವೆಯೊಬ್ಬಳನ್ನು ನೋಡುತ್ತೀರ. ಅವಳ ಬಳಿ ಹೋಗಿ ಅವಳ ಮೊಬೈಲ್ ನಂಬರ್ ಕೇಳಿ ಪಡೆದುಕೊಳ್ಳುತ್ತೀರಿ. ಮರುದಿನ ಆಕೆಗೆ ಕರೆ ಮಾಡಿ, 'ನಾನು ತುಂಬಾ ಶ್ರೀಮಂತ, ನನ್ನನ್ನು ಮದುವೆಯಾಗು' ಎನ್ನುತ್ತೀರಿ. ಅದು– ಟೆಲಿಮಾರ್ಕೆಟಿಂಗ್.

★ ಅತಿ ಸುಂದರಿಯೊಬ್ಬಳನ್ನು ಪಾರ್ಟಿಯಲ್ಲಿ ನೋಡುವಿರಿ. ಎದ್ದು ನಿಮ್ಮ ಟೈ ಸರಿಪಡಿಸಿಕೊಂಡು ಅವಳ ಬಳಿ ಸಾಗಿ ಪಾನೀಯವನ್ನು ಅವಳ ಗ್ಲಾಸಿಗೆ ಸುರಿಯುತ್ತೀರಿ. ಅವಳು ಅಕಸ್ಮಾತ್ ತನ್ನ ಪರ್ಸನ್ನು ಕೆಳಗೆ ಬೀಳಿಸಿಕೊಂಡರೆ ತಕ್ಷಣ ಎತ್ತಿಕೊಡುತ್ತೀರಿ. ಬಳಿಕ ಹೊರಡುವಾಗ ನಿಮ್ಮ ಕಾರಿನ ಬಾಗಿಲನ್ನು ಅವಳಿಗಾಗಿ ತೆರೆಯುತ್ತೀರಿ. ಅವಳನ್ನು ಕೂರಿಸಿಕೊಂಡು ಕಾರಿನಲ್ಲಿ ಹೋಗುವಾಗ 'ನಾನು ಬಹಳ ಧನಿಕ, ನನ್ನನ್ನು ಮದುವೆಯಾಗು' ಎನ್ನುತ್ತೀರಿ. ಇದು– ಸಾರ್ವಜನಿಕ ಸಂಪರ್ಕ (ಪಬ್ಲಿಕ್ ರಿಲೇಷನ್).

★ ಪಾರ್ಟಿಯೊಂದರಲ್ಲಿ ರೂಪಸಿಯೊಬ್ಬಳು ನಿಮ್ಮ ಕಣ್ಣಿಗೆ ಬೀಳುತ್ತಾಳೆ.ಆಕೆಯೇ ನಿಮ್ಮ ಹತ್ತಿರ ಬಂದು, 'ನೀನು ತುಂಬಾ ಶ್ರೀಮಂತನಿರುವೆ. ನನ್ನನ್ನು ಮದುವೆಯಾಗುತ್ತೀಯಾ?' ಎಂದು ಕೇಳುತ್ತಾಳೆ. ಇದು– ಬ್ರಾಂಡ್ ಮಾನ್ಯತೆ (ಬ್ರಾಂಡ್ ರೆಕಗ್ನಿಷನ್).

★ ಪಾರ್ಟಿಯಲ್ಲಿ ಮಿಂಚುತ್ತಿರುವ ಹುಡುಗಿ ಬಳಿ ಹೋಗಿ, 'ನಾನು ಶ್ರೀಮಂತ. ನನ್ನನ್ನು ಮದುವೆಯಾಗು' ಎನ್ನುತ್ತೀರಿ. ಆಗ ಅವಳು ನಿಮ್ಮ ಕಪಾಳಕ್ಕೆ ರಪ್ಪೆಂದು ಬಾರಿಸುತ್ತಾಳೆ. ಅದು– ಕಸ್ಟಮರ್ ಫೀಡ್‌ಬ್ಯಾಕ್.

★ ಪಾರ್ಟಿಯೊಂದರಲ್ಲಿ ಸುಂದರಿಯೊಬ್ಬಳನ್ನು ನೋಡಿ, ಬಳಿ ತೆರಳಿ, 'ನನ್ನನ್ನು ಮದುವೆಯಾಗು. ನಾನು ಶ್ರೀಮಂತ' ಎಂದಾಗ, ಅವಳು ತನ್ನ ಗಂಡನನ್ನು ಕರೆದು ನಿಮಗೆ ಪರಿಚಯ ಮಾಡಿಕೊಡುತ್ತಾಳೆ. ಇದು– ಬೇಡಿಕೆ ಮತ್ತು ಪೂರೈಕೆಯ ನಡುವಿನ ಅಂತರ!

★ ಪಾರ್ಟಿಯಲ್ಲಿ ಸುಂದರಿಯೊಬ್ಬಳನ್ನು ನೋಡಿ ನೀವು ಇನ್ನೇನು ಅವಳ ಬಳಿ ಹೋಗಬೇಕು. ಅಷ್ಟರಲ್ಲಿ ಬೇರೊಬ್ಬ ಬಂದು 'ನಾನು ಬಹಳ ಧನಿಕ, ನನ್ನನ್ನೇ ಮದುವೆಯಾಗು' ಎಂದು ಆಕೆಗೆ ಹೇಳುತ್ತಾನೆ. ಆಕೆ ಆತನ ಜೊತೆ ಹೋಗುತ್ತಾಳೆ. ಇದು– ನಿಮ್ಮ ಮಾರ್ಕೆಟ್ ಷೇರನ್ನು ಕಬಳಿಸುವ ಸ್ಪರ್ಧೆ.

★ ಚೆಲುವೆಯೊಬ್ಬಳ ಬಳಿ ಸಾಗಿ ಇನ್ನೇನು 'ನಾನು ಬಹಳ ಶ್ರೀಮಂತ, ನನ್ನನ್ನು ಮದುವೆಯಾಗು' ಎಂದು ಹೇಳಬೇಕು. ಅಷ್ಟರಲ್ಲಿ ನಿಮ್ಮ ಹೆಂಡತಿ ಬಂದು ಬಿಡುತ್ತಾಳೆ. ಇದು– ಹೊಸ ಮಾರ್ಕೆಟ್ ಪ್ರವೇಶದ ನಿರ್ಬಂಧ!

ಕೇಳಿದ್ದು: **ವಿದ್ಯಾ ಹಾಲಭಾವಿ**